ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

**ಸಂಖ್ಯೆ: DCE/BUD/ROC/24/2022-23**

**ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,**
**ಬೆಂಗಳೂರು ದಿನಾಂಕ:17.05.2022.**

# ಸುತ್ತೋಲೆ

ವಿಷಯ: ಕಾಲೇಜು ಶಿಕ್ಷಣ ಇಲಾಖಾ ವ್ಯಾಪ್ತಿಯಡಿ ಬರುವ ಖಾಸಗಿ ಅನುದಾನಿತ ಪದವಿ , ಬಿಎಡ್ ಮತ್ತು ಚಿತ್ರಕಲಾ ಕಾಲೇಜುಗಳ ಬೋಧಕರು, ಮತ್ತು ಕಛೇರಿ ಸಿಬ್ಬಂದಿಗಳಿಗೆ ವಿವಿಧ ಬಾಕಿಗಳನ್ನು ಪಾವತಿಸಲು ಅಗತ್ಯ ಮಾಹಿತಿ ಸಲ್ಲಿಸುವ ಕುರಿತು.

ಉಲ್ಲೇಖ: ಈ ಕಛೇರಿಯ ಸಮ ಸಂಖ್ಯೆಯ ಪತ್ರದ ದಿನಾಂಕ 19.04.2022

*****

ಪ್ರಸ್ತಾಪಿತ ವಿಷಯಕ್ಕೆ ಸಂಬಂಧಿಸಿದಂತೆ ಇಲಾಖೆ ವ್ಯಾಪ್ತಿಯ ಖಾಸಗಿ ಅನುದಾನಿತ ಪದವಿ , ಬಿಎಡ್ ಮತ್ತು ಚಿತ್ರಕಲಾ ಕಾಲೇಜುಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ / ನಿವೃತ್ತಿ ಹೊಂದಿರುವ ಬೋಧಕರು, ಮತ್ತು ಕಛೇರಿ ಸಿಬ್ಬಂದಿಗಳಿಗೆ ವೇತನ ಬಾಕಿ ಮತ್ತು ಇತರೆ ಬಾಕಿಗಳಿಗೆ ಸಂಬಂಧಿಸಿದಂತೆ ಸಂಬಂಧಪಟ್ಟ ಜಂಟಿ ನಿರ್ದೇಶಕರಿಂದ ಅನುಮೋದನೆಯಾಗಿ ಹಿಂಬಾಕಿ ಪಾವತಿಯಾಗದೇ ಬಾಕಿ ಇದ್ದಲ್ಲಿ ವಿವರಗಳು ಹಾಗೂ ಬಿಲ್ ಅನುಮೋದನೆ ಮಾಡಿರುವ ಪ್ರತಿಯೊಂದಿಗೆ ಈ ಕಛೇರಿಗೆ ದಿನಾಂಕ 08.06.2022ರ ಒಳಗಾಗಿ ಈ ಕಛೇರಿಗೆ ಸಂಬಂಧಪಟ್ಟ ಜಂಟಿ ನಿರ್ದೇಶಕರ ಸಹಿಯೊಂದಿಗೆ ಅರ್ಜಿ ಸಲ್ಲಿಸಲು ಸೂಚಿಸಲಾಗಿದೆ. ***ಸದರಿ ಬಾಕಿ ಪಾವತಿಸುವ ಸಂಬಂಧ ಈಗಾಗಲೇ ಜಂಟಿ ನಿರ್ದೇಶಕರ ಕಛೇರಿಯಿಂದ ಕೇಂದ್ರ ಕಛೇರಿಗೆ ಈಗಾಗಲೇ ಮಾಹಿತಿ ರವಾನಿಸಿದ್ದಲ್ಲಿ*** ಮತ್ತೊಮ್ಮೆ ಪ್ರಸ್ತಾವನೆ ಸಲ್ಲಿಸುವ ಅಗತ್ಯ ಇರುವುದಿಲ್ಲ.

ಮೃತ ನೌಕರರುಗಳಿಗೆ ಪಾವತಿಸಬೇಕಾದ ಬಾಕಿಗಳಿಗೆ ಸಂಬಂದಿಸಿದಂತೆ ಮೃತರ ಕಾನೂನುಬದ್ಧ ವಾರಸುದಾರರು ಪ್ರಸ್ತಾವನೆ ಸಲ್ಲಿಸಬಹುದಾಗಿರುತ್ತದೆ. ವಿವಿಧ ಬಾಕಿಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ದಾವೆ ಹೂಡಿರುವ, ನ್ಯಾಯಾಲಯ ತೀರ್ಪಿನಂತೆ ಹಿಂಬಾಕಿಗೆ ಅರ್ಹರಾಗಿರುವ ಹಾಗೂ ನಿಂದನಾ ಅರ್ಜಿ ದಾಖಲಿಸಿರುವ ಅರ್ಜಿದಾರರೂ ಸಹ ಹಿಂಬಾಕಿ ಪಡೆಯಲು ಪ್ರಸ್ತಾವನೆಸಲ್ಲಿಸಿ ಪ್ರಕರಣಗಳನ್ನು ಮುಕ್ತಾಯಗೊಳಿಸಿಕೊಳ್ಳಲು ತಿಳಿಸಲಾಗಿದೆ. ಸದರಿ ಮಾಹಿತಿಯನ್ನು ಜಂಟಿ ನಿರ್ದೇಶಕರುಗಳು ಮತ್ತು ಇಲಾಖಾ ವ್ಯಾಪ್ತಿಯ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳು ಕರ್ತವ್ಯ ನಿರ್ವಹಿಸುತ್ತಿರುವ / ನಿವೃತ್ತಿ ಹೊಂದಿರುವ ಬೋಧಕರು, ಮತ್ತು ಕಛೇರಿ ಸಿಬ್ಬಂದಿಗಳ ಗಮನಕ್ಕೆ ತರುವಂತೆ ಸೂಚಿಸಲಾಗಿದೆ.

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

**1) ಎಲ್ಲಾ ಪ್ರಾದೇಶಿಕ ಜಂಟಿ ನಿರ್ದೇಶಕರುಗಳಿಗೆ**

**ಪ್ರತಿಯನ್ನು:**

1) ಇಲಾಖಾ ವ್ಯಾಪ್ತಿಯ ಎಲ್ಲಾ ಖಾಸಗಿ ಅನುದಾನಿತ ಪದವಿ , ಬಿಎಡ್ ಮತ್ತು ಚಿತ್ರಕಲಾ ಕಾಲೇಜುಗಳ ಪ್ರಾಂಶುಪಾಲರುಗಳಿಗೆ- ಕಾಲೇಜಿನ ಎಲ್ಲಾ ಸಿಬ್ಬಂದಿಗಳಿಗೆ ಪರಿಚಲಿಸಿ, ಸಹಿ ಪಡೆದು ದಾಖಲೆಯನ್ನು ಕಾಲೇಜಿನಲ್ಲಿ ಸಂರಕ್ಷಿಸುವುದು.
2) ಮಾಹಿತಿ ಅಧಿಕಾರಿಗಳು ಮಾ.ತಂ.ವಿ ಕೇಂದ್ರಕಛೇರಿ ಬೆಂಗಳೂರು- ಇಲಾಖಾ ಜಾಲತಾಣದಲ್ಲಿ ಪ್ರಕಟಿಸಲು
3) ಕಛೇರಿ ಪ್ರತಿ / ಹೆಚ್ಚಿನ ಪ್ರತಿ

## ಮಾದರಿ ಅರ್ಜಿ ನಮೂನೆ

| | |
|---|---|
| ನೌಕರರ ಹೆಸರು: | |
| ಪದನಾಮ: | |
| ಖಾಸಗಿ ಅನುದಾನಿತ ಕಾಲೇಜಿನ ಹೆಸರು: | |
| ಹಿಂಬಾಕಿಯ ಸ್ವರೂಪ | |
| ಹಿಂಬಾಕಿಯ ಅವಧಿ | |
| ಹಿಂಬಾಕಿಯ ಒಟ್ಟು ಮೊತ್ತ : | |
| ಜಂಟಿ ನಿರ್ದೇಶಕರಿಂದ ಅನುಮೋದನೆ ಸಂಖ್ಯೆ ಮತ್ತು ದಿನಾಂಕ: | |

**ಅರ್ಜಿದಾರರ ಸಹಿ**

ಈ ಕಛೇರಿಯ ದಾಖಲಾತಿಗಳನ್ನು ಪರಿಶೀಲಿಸಲಾಗಿದ್ದು, ಮೇಲಿನ ವಿವರಗಳಂತೆ ನೌಕರರು ಹಿಂಬಾಕಿ ಪಡೆಯಲು ಅರ್ಹರಾಗಿದ್ದು, ಸದರಿ ನೌಕರರಿಗೆ ದಿ: __________ನಿಂದ ದಿ:__________ಅವಧಿಗೆ ಒಟ್ಟು ಹಿಂಬಾಕಿ ಮೊತ್ತ ರೂ __________/- ಅನ್ನು ಇದುವರೆವಿಗೂ ಪಾವತಿಸಿರುವುದಿಲ್ಲ ಎಂದು ಈ ಮೂಲಕ ದೃಢೀಕರಿಸಲಾಗಿದೆ.

**ಜಂಟಿ ನಿರ್ದೇಶಕರ ಸಹಿ**

**ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲಾತಿಗಳು**

**1) ಜಂಟಿ ನಿರ್ದೇಶಕರ ಅನುಮೋದನೆ ಆದೇಶದ ಪ್ರತಿ**

**2) ಎ.ಜಿ.ಪಿ / ಪಿ.ಹೆಚ್.ಡಿ ಮುಂಗಡ ಬಡ್ತಿ ಹಿಂಬಾಕಿಗಳಿಗೆ ಸಂಬಂಧಿಸಿದಂತೆ ಇಲಾಖಾ ಆದೇಶಗಳು**